No.MAG(3)/NPP/98/2023-2024

No.MAG(3)/NPP/99/2023-2024





ಸ್ಥಾಪನೆ : ೧೯೭೯

# ಹೊಂಗನಸು

ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು–೧೧೩

ಸಂಪುಟ: ೧೩ ಸಂಚಿಕೆ: ೧ | ಏಪ್ರಿಲ್ ೨೦೨೫ | ಪುಟಗಳು-೮ | ವಾರ್ಷಿಕ ಚಂದಾ ರೂ.೨೦/- | ಶ್ರೀ ವಿಶ್ವಾವಸು ಸಂವತ್ಸರ
Volume: 12 Issue: 12 | March 2025 | Pages-8 | Annual Subscription Rs.20/- | ಫಾಲ್ಗುಣ-ಚೈತ್ರ ಮಾಸ

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ದಿ। ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕರು
**ಡಾ. ಪಿ.ವಿ. ನಾರಾಯಣ**
ಗೌರವಾಧ್ಯಕ್ಷರು

**ಪದಾಧಿಕಾರಿಗಳು**
- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೮೧೪೮೪
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೯೪೫೦೦೪೮೪೬

**ಸಂಯೋಜನಾಧಿಕಾರಿಗಳು**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ

## ಸಂನುಡಿ

## ಬಿ.ಎಂ.ಶ್ರೀ. ಪ್ರತಿಷ್ಠಾನವು ತನ್ನ ಹೊಂಗನಸು ಬಳಗಕ್ಕೆ ವಿಶ್ವಾವಸು ಸಂವತ್ಸರದ ಶುಭವನ್ನು ಹಾರೈಸುತ್ತದೆ



### ಕನ್ನಡ ನಾಡು-ನುಡಿ: ಅಂತರಂಗ ಬಹಿರಂಗ ಛಡಿ

ಯಾವುದೇ ಭಾಷೆಯಿರಲಿ, ಯಾವುದೇ ದೇಶವಿರಲಿ, ಯಾವುದೇ ಕೋಶವಿರಲಿ ಪ್ರಪಂಚದಾದ್ಯಂತ ಅಂತರಂಗ–ಬಹಿರಂಗ ಪರಿವರ್ತನೆ ಸರ್ವೇಸಾಮಾನ್ಯ. ಇದಕ್ಕೆ ಇತಿಹಾಸದ ಪುಟಗಳೇ ಸಾಕ್ಷಿ. ಕನ್ನಡ ನಾಡು–ನುಡಿಯೂ ಇದಕ್ಕೆ ಹೊರತಲ್ಲ. ಕನ್ನಡ ನಾಡಿನ ಜಾಡು ಕೆದಕಿದರೆ ಅಂಗೈನಲ್ಲಿನ ಅರಮನೆಯೇ ಕಾಣುವುದು. ಆಟದ ಮೈದಾನದ ಚೆಂಡಿನಂತೆ ಅತ್ತಿಂದಿತ್ತ–ಇತ್ತಿಂದತ್ತ ಪುಟಿಯುತ್ತಲೇ ಇದ್ದು ನಾಡು–ನುಡಿಗೆ ಛಡಿಯೇಟು ಬೀಳುತ್ತಲೇ ಬಂದಿದೆ. ನಮ್ಮ ದೇಶದ ಇತಿಹಾಸವನ್ನೇ ಅವಲೋಕಿಸಿದರೆ ಹಿಂದೂಸ್ಥಾನ, ಅಖಂಡ ಭಾರತ, ಇಂಡಿಯಾ ಆಗುವಷ್ಟರಲ್ಲಿ ಅನೇಕ ರಾಜರುಗಳ ಆಧಿಪತ್ಯದಲ್ಲಿ ಅನ್ಯ ದೇಶಗಳ ದಬ್ಬಾಳಿಕೆಯಲ್ಲಿ ನಾಡು ಮತ್ತು ನುಡಿ ಒಮ್ಮೆ ಬಡವಾಗಿದೆ ಮತ್ತೊಮ್ಮೆ ಬಲಿತಿದೆ.

ಕನ್ನಡ ನಾಡು–ನುಡಿ ಇದೇ ಜಾಡಿನಲ್ಲಿ ಅನೇಕ ಸಾಮ್ರಾಜ್ಯಗಳ ಆಧಿಪತ್ಯದಲ್ಲಿ ಸಂಕುಚಿತವಾಗಿ, ಸಮೃದ್ಧಿಯಾಗಿ ಏರಿಳಿತಗಳನ್ನು ಅನುಭವಿಸಿದೆ. ಆಳಿದ ಪ್ರಭುಗಳು ಯಾರೇ ಇರಲಿ, ಅವರವರ ಮನಸೋ ಇಚ್ಛೆಯಂತೆ ಪರಿವರ್ತನೆಗೊಂಡಿದೆ. ಒಂದು ಕಾಲದಲ್ಲಿ ಪಾಶ್ಚಿಮಾತ್ಯನಾದ ಕಿಟ್ಟೆಲ್ ಕನ್ನಡ ನುಡಿಯ ಮೇಲೆ ಅಭಿಮಾನವಿಟ್ಟು ಪೋಷಿಸುವುದರ ಜೊತೆಗೆ, ಕನ್ನಡ–English ನಿಘಂಟನ್ನು 'ಕನ್ನಡ ಭಾಷೆಯ ಅಧಿಕೃತ ನಿಘಂಟು' ಎನ್ನುವಷ್ಟರ ಮಟ್ಟಿಗೆ ರೂಪಿಸಿ, ಇಂದಿಗೂ ಅವನನ್ನು ಮರೆಯಲಾರದಂತೆ ಅಮರನಾಗಿದ್ದಾನೆ.

ಪ್ರಭುಗಳು ಬದಲಾದಂತೆ, ಆಗಿನ ಶಿಲಾಶಾಸನಗಳು ಭಾಷೆಗೆ ಬರವಣಿಗೆಯ ಸ್ವರೂಪವನ್ನು ನೀಡಿರುವುದನ್ನು ಶಿಲಾಶಾಸನ ತಜ್ಞರು ಪರಿಶೀಲಿಸಿ ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಬರವಣಿಗೆಯ ಸ್ವರೂಪದ ಜೊತೆಗೆ, ಬರೆಯಲು ಉಪಯೋಗಿಸಿದ ಸಾಧನಗಳಲ್ಲೂ ಪರಿವರ್ತನೆ ಆಗಿದೆ. ಅದಕ್ಕೆ ತಾಳೆಗರಿಯೇ ಒಂದು ನಿದರ್ಶನ. ಕೃಷ್ಣದೇವರಾಯರ ಕಾಲದಲ್ಲಿ ಇಂದಿನ ಭಾಷಾವಾರು ವಿಂಗಡಣೆ ಇರಲಿಲ್ಲ. ತೆಲುಗು ಮತ್ತು ಕನ್ನಡ ಲಿಪಿಗಳಲ್ಲಿ ಬಹಳಷ್ಟು ಸಾಮ್ಯತೆ ಇರುತ್ತಿತ್ತು. ಈ ದೊರೆಗಳ ಆಳ್ವಿಕೆಯಲ್ಲಿ ವಿಶಾಲವಾದ ಅರ್ಧ ಭಾರತವನ್ನೇ ಕಾಣುತ್ತೇವೆ. ಈಗಿನ ದಕ್ಷಿಣಭಾರತದ ಎಲ್ಲಾ ರಾಜ್ಯಗಳೂ ಒಟ್ಟಾಗಿದ್ದು, ಎಲ್ಲಾ ಭಾಷೆಯ ಪ್ರಜೆಗಳೂ ತಮ್ಮ ತಮ್ಮ ಭಾಷೆಯನ್ನು ಆಡುತ್ತಾ, ಉಳಿದ ಭಾಷೆಗಳನ್ನೂ ಅನಿವಾರ್ಯವಾಗಿ ಬಲ್ಲವರಾಗಿದ್ದರು. ದ್ರಾವಿಡ ಭಾಷೆಯ ಆದಿಗೆ ಹೋಗದೆ, ಕೇವಲ ತಮಿಳು, ತೆಲುಗು, ಮಲೆಯಾಳಿ, ಮರಾಠಿ ಭಾಷೆಗಳಿಂದ ಮತ್ತು ಅನ್ಯ ಭಾಷಿಕರಿಂದ ಕನ್ನಡ ಭಾಷೆಯ ಮೇಲೆ ಬಹಿರಂಗ ಪ್ರಭಾವ ಬೀರಿರುವುದನ್ನು ಕಾಣಬಹುದು. ತದನಂತರ, ಕನ್ನಡ ನಾಡು–ನುಡಿಯ ಮೇಲೆ ನಮ್ಮವರಿಂದಲೇ ಅಂತರಂಗ ಪ್ರಭಾವ(ಪ್ರಮಾಣ ಸಣ್ಣದಿದ್ದರೂ) ಆಗಿರುವುದನ್ನು, ಇಂದೂ ಆಗುತ್ತಿರುವುದನ್ನು ಗಮನಿಸಬಹುದು. ಕನ್ನಡಿಗರಲ್ಲೇ ಬೇರೂರಿರುವ ಜಾತಿ, ಉಪಜಾತಿಗಳಲ್ಲಿ ಇರುವ ಆಡು ಭಾಷೆ, ತುಳು, ಕೊಂಕಣಿ, ಹವ್ಯಕ, ಕುಂದಾಪ್ರ, ಐಯ್ಯಂಗಾರ್, ಸಂಕೇತಿಗಳು ಆಡುವ ನುಡಿಯ ಪರಿ ಇತ್ಯಾದಿ.

ಇದೆಲ್ಲದರ ಜೊತೆಗೆ ಬ್ರಿಟಿಷರು ದೇಶವನ್ನು ಬಿಟ್ಟು ಹೋದರೂ ಇಂಗ್ಲಿಷ್ ಭಾಷೆ ತನ್ನ ಆಧಿಪತ್ಯವನ್ನು, ಹಾಗೇ ಅಭಿರುಚಿಯನ್ನು ಅಚ್ಚಳಿಯದೆ ಉಳಿಸಿ ಕನ್ನಡ ನುಡಿಯಲ್ಲಿ 'ಅನ್ಯಥಾ ಶರಣಂ ನಾಸ್ತಿ' ಎನ್ನುವಂತೆ ಬದಲಿ ಕನ್ನಡ ಪದಗಳಿಲ್ಲದೆ ಇಂಗ್ಲಿಷ್ ಪದಗಳನ್ನು ನೆಟ್ಟುಬಿಟ್ಟಿದೆ. ಮನೆಗೊಂದು ಭಾಷೆ, ಮಂದಿರಕ್ಕೊಂದು ಭಾಷೆ, ವ್ಯವಹಾರಕ್ಕೊಂದು ಭಾಷೆ, ಮಕ್ಕಳಿಗಂತೂ ತ್ರಿಭಾಷಾ ಸೂತ್ರದಡಿಯಲ್ಲಿ ಮೂರು ಭಾಷಾ ಕಲಿಕೆ, ನೆರೆಹೊರೆ ಪ್ರದೇಶಗಳ ಸಂಪರ್ಕಕ್ಕೆ ಒಂದು ಭಾಷೆ ಹೀಗೆ ಕನ್ನಡವಲ್ಲದೆ ಕನ್ನಡೇತರ ಭಾಷೆಗಳೂ ಈ ಜಂಜಾಟದಲ್ಲಿ ಸಿಕ್ಕಿರುವುದು ಸತ್ಯ. ನಿತ್ಯಜೀವನದಲ್ಲಿ ರಸ್ತೆಗಿಳಿದಂತೆ, ಅಂಗಡಿಗಳ ಮಾರಾಟದ ಸಮಯದಲ್ಲಿ ಉರ್ದು ಭಾಷಿಕರ ಕನ್ನಡದ ಪ್ರಭಾವವನ್ನೂ ಮರೆಯುವಂತಿಲ್ಲ. ಈ ಅಂತರಂಗ ಬಹಿರಂಗ ಛಡಿ ಕನ್ನಡ ಭಾಷೆಯನ್ನು ದಿನಗಳೆದಂತೆ ಎತ್ತ ಸಾಗಿಸುತ್ತದೋ ಕಾದು ನೋಡಬೇಕು.

**ಡಾ. ಬೆಳವಾಡಿ ಪ್ರಭಾಕರ್**
ಸಂಪಾದಕರು

## ವಿಶೇಷ ಸೂಚನೆ

ಪ್ರಿಯ ಓದುಗರೇ,

ತಮಗೆಲ್ಲಾ ಗೊತ್ತಿದ್ದ ಹಾಗೆ ಬಿ.ಎಂ.ಶ್ರೀ. ಪ್ರತಿಷ್ಠಾನ ದೆಹಲಿಯ ಪತ್ರಿಕಾ ಮಂಡಳಿಯಿಂದ ಪರಿಷ್ಕೃತ ನೋಂದಣಿ ಪತ್ರ ಪಡೆಯಲು ಶ್ರಮ ವಹಿಸುತ್ತಿದೆ. ಅಲ್ಲಿಯವರೆಗೆ ಅಂಚೆ ಕಚೇರಿಯಿಂದ ರಿಯಾಯತಿ ದರದಲ್ಲಿ ಅಂಚೆ ಚೀಟಿ ಹಚ್ಚಿ ತಮ್ಮ ತಮ್ಮ ವಿಳಾಸಕ್ಕೆ ಕಳಿಸಲು ಸಾಧ್ಯವಾಗುತ್ತಿಲ್ಲ. ಆದರೂ ಕೆಲವರು ಬಿ.ಎಂ.ಶ್ರೀ. ಪ್ರತಿಷ್ಠಾನದ ಕಚೇರಿಗೆ ಕರೆ ಮಾಡಿ 'ಹೊಂಗನಸು' ಪತ್ರಿಕೆಯನ್ನು ಅಂಚೆ ಮೂಲಕ ಕಳಿಸುವಂತೆ ವಿನಂತಿಸುತ್ತಿದ್ದಾರೆ. ಬಹಳಷ್ಟು ಓದುಗರು ಅಂತರ್ಜಾಲದ ಮೂಲಕ ಪಡೆದು ತೃಪ್ತಿ ಪಟ್ಟಿದ್ದಾರೆ. ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೂ 'ಹೊಂಗನಸು' ಅಂಚೆ ಮೂಲಕ ತಲುಪಲಿ ಎಂಬ ಆಸೆ ಇದೆ. ದೆಹಲಿಯಿಂದ ಒಪ್ಪಿಗೆ ಬರುವವರೆಗೆ ಬೇಕೇಬೇಕು ಎನ್ನುವ ಕೆಲವರಿಗೆ ಅಂಚೆ ಮೂಲಕ ಕಳಿಸುವ ಬಗ್ಗೆ ಹಣಕಾಸಿನ ಭಾರವನ್ನು ಪರಿಗಣಿಸಿ ವ್ಯವಸ್ಥೆ ಮಾಡಲಾಗುವುದು. ಅಂತಹವರು ನಮ್ಮ ಕಚೇರಿಗೆ ತಮ್ಮ ಅಂಚೆ ವಿಳಾಸವನ್ನು ಕೊಟ್ಟರೆ ಸಾಧ್ಯವಾದಷ್ಟು ಪರಿಗಣಿಸಲಾಗುವುದು. WhatsApp ಇದ್ದವರು ತಮ್ಮ ಹೆಸರಿನೊಂದಿಗೆ ಮೊಬೈಲ್ ಸಂಖ್ಯೆ ಕಳುಹಿಸಬಹುದು.

**ಡಾ. ಬೆಳವಾಡಿ ಪ್ರಭಾಕರ್**
ಸಂಪಾದಕರು

ಬಿ.ಎಂ.ಶ್ರೀ. ಪ್ರತಿಷ್ಠಾನದ ವಾಣಿ ಸಂಖ್ಯೆ: **9972812127**

## ಇಲ್ಲಿಯವರೆಗೆ ನಡೆದ ಕಾರ್ಯಕ್ರಮಗಳು



### ದಿನಾಂಕ ೧೪/೦೩/೨೦೨೫ ಶುಕ್ರವಾರ ಸಂಜೆ ಡಾ. ಉಪ್ಪಂಗಳ ರಾಮಭಟ್ಟ ದತ್ತಿ ಉಪನ್ಯಾಸ

ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನ ಹಿರಿಯ ಕನ್ನಡ ಅಧ್ಯಾಪಕರಾದ ಪ್ರೊ. ಮಧು ಬಿ.ಎನ್. ಅವರು 'ಪ್ರೊ. ಪೂರ್ಣಚಂದ್ರ ತೇಜಸ್ವಿ ಅವರ ಮಿಲೇನಿಯಂ ವಿಶ್ವದರ್ಶನಕ್ಕೊಂದು ಮುನ್ನುಡಿ' ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದರು.

ಪ್ರಾರಂಭದಲ್ಲಿ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಬಿ.ಎಸ್. ಗುರುಪ್ರಸಾದ ಅವರು ಈ ಸರಣಿಯಲ್ಲಿ ಇಂದು ಇದು ಒಂಬತ್ತನೇ ದತ್ತಿ ಎನ್ನುತ್ತಾ, ಡಾ. ಉಪ್ಪಂಗಳ ರಾಮಭಟ್ಟ ಅವರ ಅಮೋಘ ಕಾರ್ಯಗಳ ಬಗ್ಗೆ ಶ್ರೋತೃಗಳಿಗೆ ಪರಿಚಯಿಸಿದರು. ಹಾಗೇ ಉಪನ್ಯಾಸಕ ಪ್ರೊ. ಮಧು ಬಿ.ಎನ್., ಅಧ್ಯಕ್ಷತೆ ವಹಿಸಿದ್ದ ಪ್ರೊ. ಚಂದ್ರಶೇಖರ ನಾದೂರು, ಪ್ರತ್ಯಕ್ಷ ಮತ್ತು ಫೇಸ್ ಬುಕ್ ಪ್ರೇಕ್ಷಕರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ಉಪನ್ಯಾಸಕರ ಪರಿಚಯವನ್ನೂ ಮಾಡಿದರು.

**'ತೇಜಸ್ವಿಯವರ ಜೀವನವೇ ಒಂದು ಹುಡುಕಾಟ'**

ಉಪನ್ಯಾಸಕ ಪ್ರೊ. ಮಧು ಬಿ.ಎನ್., ಅವರು ಮಾತನಾಡುತ್ತಾ 'ಮಿಲೇನಿಯಂ ವಿಶ್ವದರ್ಶನ' ಎಂಬ ಪುಸ್ತಕದ ಸಂಪುಟ ಸರಣಿಯನ್ನೇ ಪೂರ್ಣಚಂದ್ರ ತೇಜಸ್ವಿ ಪ್ರಕಟಿಸಿದ್ದಾರೆ. ಮಧ್ಯಕಾಲೀನ ಲೇಖಕರಲ್ಲಿ ಪೂರ್ಣಚಂದ್ರ ತೇಜಸ್ವಿಯವರನ್ನು ಮರೆಯುವ ಹಾಗೇ ಇಲ್ಲ. ಅಂತಹ ಶ್ರೇಷ್ಠ ಮಟ್ಟದ ಸಾಹಿತಿ ಅವರು. ಸಾಹಿತ್ಯ ಲೋಕದಲ್ಲಿ ತಮ್ಮದೇ ಹೆಸರನ್ನು ಮೂಡಿಸಿದ ತೇಜಸ್ವಿ ಅವರು ೧೯೯೮–೯೯ರ ಸುಮಾರಿನಲ್ಲಿ ವಿಶ್ವದ ಆಗುಹೋಗುಗಳ ಬಗ್ಗೆ ಆಸಕ್ತಿ ಉಳ್ಳವರಾಗಿ, ಆಗಿದ್ದ ಅಂತರ್ಜಾಲದ ಜಗತ್ತಿನಲ್ಲಿ ಮುಳುಗಿಸಿಕೊಂಡು ಹಿಂದೆ ಹೇಗಿತ್ತು, ಮುಂದಿನ ಮಿಲೇನಿಯಂ ಹೊತ್ತಿಗೆ ಏನಿರಬಹುದು, ಹೇಗಿರಬಹುದು ಅನ್ನುವ ವಿಷಯಗಳ ಗ್ರಹಿಕೆಗೆ ಮುಂದಾಗುತ್ತಾರೆ. ಈ ಆಸಕ್ತಿಯೇ 'ಮಿಲೇನಿಯಂ ವಿಶ್ವದರ್ಶನ' ಬರೆಯಲು ನೆರವಾಗುತ್ತದೆ. ಇದರ ಹಿಂದಿನ ಅವರ ಶ್ರಮ ಅಗಾಧವಾದುದು. ಅಂತರ್ಜಾಲದಲ್ಲಿ ತಿಳಿದುಬಂದಿದ್ದನ್ನು ಇನ್ನೂ ವಿಸ್ತಾರವಾಗಿ ಅರಿಯಲು, ಅವರಿಗೆ ಕುತೂಹಲ ಅನ್ನಿಸಿದ ವಿಷಯಗಳ ಬಗ್ಗೆ ವಿವರಗಳನ್ನು ಕೊಡುವಂತೆ ಆ ಪ್ರದೇಶಗಳಲ್ಲಿರುವ ಅವರ ಅನೇಕ ಮಿತ್ರರಿಗೆ ಪತ್ರಗಳನ್ನು ಬರೆದು, ಅದರಲ್ಲಿರುವ ಸ್ವಾರಸ್ಯಕರ ಮಾಹಿತಿಗಳನ್ನು ಕ್ರೋಢೀಕರಿಸಿ ತಮ್ಮದೇ ಆದ ವೈಶಿಷ್ಟ್ಯಮಯ ರೀತಿಯಲ್ಲಿ ಪುಸ್ತಕವನ್ನು ಹೊರತರುತ್ತಾರೆ. ಇದರಲ್ಲಿ ಅಡಗಿರುವ ವಿಷಯಗಳು ನಮ್ಮ ಕನ್ನಡಿಗರಿಗೆ ದೊರೆಯಲಿ ಎಂಬುದೇ ಅವರ ಪರಮ ಗುರಿಯಾಗಿತ್ತು. ಬಹುಶಃ ಇಂತಹ ಸಾಹಸಕ್ಕೆ ಪೂರ್ಣಚಂದ್ರ ಅವರು ಮೊದಲು ಬರೆದ ಪ್ರವಾಸ ಕಥನ 'ಅಲೆಮಾರಿ ಅಂಡಮಾನ್' ಪ್ರೇರಣೆಯಾಗಿರಬಹುದು. ಮಹಾನದಿ ನೈಲ್, ಮರುಭೂಮಿಗಳು, ದ್ವೀಪಗಳು ಅಂದಿನ ಜನಜೀವನ, ಮುಂತಾದ ಆಕರ್ಷಕ ವಿಸ್ಮಯಗಳ ಬಗ್ಗೆ ಕುತೂಹಲ ಮೂಡುವಂತೆ ಬರೆಯುವುದೇ ಅವರ ವಿದ್ವತ್ ಆಗಿತ್ತು. ಓದುಗರಿಗೆ ಓದುತ್ತಾ ತಾವೇ ಅಲ್ಲಿ ಪ್ರವಾಸ ಮಾಡುತ್ತಿದ್ದೇವೇನೋ ಅನ್ನುವಷ್ಟು ಪ್ರಭಾವ ಬೀರುವ ಒಕ್ಕಣೆಯನ್ನು ನಾವು 'ಮಿಲೇನಿಯಂ ವಿಶ್ವದರ್ಶನ'ದಲ್ಲಿ ಕಾಣಬಹುದು. ಕಣಕಣದಲ್ಲೂ 'ಹುಡುಕಾಟ'ದ ಬೇಗುದಿ ಹುದುಗಿರುವುದು ಎದ್ದು ಕಾಣುವಂತಿದೆ ಅವರ ಬರಹಗಳಲ್ಲಿ.

ಪೂರ್ಣಚಂದ್ರ ತೇಜಸ್ವಿ ಅವರು ನಿರೂಪಿಸಿರುವ, ಮಿಲೇನಿಯಂನಲ್ಲಿ ನಡೆದ ಆ ಪ್ರತಿಯೊಂದು ಘಟನೆಯೂ, ಕವಿ ಚೆನ್ನವೀರ ಕಣವಿಯವರು ಬರೆದಿರುವಂತೆ 'ವಿಶ್ವ ವಿನೂತನ, ವಿದ್ಯಾ ಚೇತನ. ಚೈತ್ರ ಮನೋಹಾರಿ, ಸರ್ವಹೃದಯ ಸಂಸ್ಕಾರೀ....' ಅನ್ನುವಂತಿದೆ. ಈ 'ಮಿಲೇನಿಯಂ ವಿಶ್ವದರ್ಶನ' ಓದಿದವರು ಕೇವಲ ವಿಶ್ವದರ್ಶನವಲ್ಲ, ವಿಶ್ವದಕೋಶವನ್ನೇ ಬಗೆದು ನೋಡಿದಂತೆ ಭಾಸವಾಗುವ ಮುತ್ತುರತ್ನಗಳು ಅದರಲ್ಲಿ ಅಡಗಿವೆ ಎಂದು ಶ್ಲಾಘಿಸುತ್ತಾ ತಮ್ಮ ಉಪನ್ಯಾಸವನ್ನು ಮುಗಿಸಿದರು.

**ಪೂರ್ಣಚಂದ್ರ ತೇಜಸ್ವಿ ಅವರ ಸಾಹಿತ್ಯ ಒಂದು ಚಮತ್ಕಾರ**

ಪ್ರೊ. ಚಂದ್ರಶೇಖರ ನಾದೂರು ಅಧ್ಯಕ್ಷ ಭಾಷಣ ಮಾಡುತ್ತಾ ಪ್ರೊ. ಮಧು ಅವರು ಒಂದು ಸಾಹಸವನ್ನೇ ಇಂದು ಮಾಡಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಅವರ ಕೃತಿಗಳ ಬಗ್ಗೆ ಮಾತನಾಡಲು ಸಮಯದ ಮಿತಿ ಹೇರಲು ಸಾಧ್ಯವೇ ಇಲ್ಲ. ಮಧು ಅವರು 'ಮಿಲೇನಿಯಂ ವಿಶ್ವದರ್ಶನ'ದ ಹದಿನಾರು ಸಂಪುಟಗಳನ್ನೂ ಕ್ರೋಢೀಕರಿಸಿ ಕೇವಲ ಒಂದು ಘಂಟೆಯಲ್ಲಿ ಅದರಲ್ಲಿರುವ ಅತ್ಯಂತ ಕುತೂಹಲಕಾರಿ ವಿಸ್ಮಯಗಳನ್ನು ನಮ್ಮ ಮುಂದೆ ಮನಮುಟ್ಟುವಂತೆ ತೆರೆದಿಟ್ಟಿದ್ದಾರೆ. ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯವನ್ನು ಇಂದಿನ ಯುವಕರೂ ಆಸಕ್ತಿಯಿಂದ ಓದುತ್ತಾರೆ ಎಂದರೆ ಅವರ ಬರವಣಿಗೆಯ ಚಮತ್ಕಾರವೇ ಕಾರಣ ಅನ್ನಬೇಕು ಅಂದರು.

ವಂದನಾರ್ಪಣೆ ಮತ್ತು ಉಪನ್ಯಾಸಕರಿಗೆ ನೆನಪಿನ ಕಾಣಿಕೆ ಸಲ್ಲಿಸಿದ ನಂತರ ಕಾರ್ಯಕ್ರಮ ಮುಕ್ತಾಯವಾಯಿತು.

## ದಿನಾಂಕ ೧೯/೦೩/೨೦೨೫ ಬುಧವಾರ ಸಂಜೆ ಡಾ. ಪುಟ್ಟಶಂಕರಪ್ಪ ಶ್ರೀಮತಿ ರಾಜಲಕ್ಷ್ಮಿ ದತ್ತಿ ಉಪನ್ಯಾಸ ನಡೆಯಿತು.



ವಿದ್ವಾನ್ ಆರ್.ಎಸ್. ಪ್ರಗಲ್ಭ ಅವರು 'ಉಪನಿಷತ್ತು ಹಾಗೂ ಅದರಲ್ಲಿನ ನೀತಿ ಪಾಠ' ಎಂಬ ವಿಷಯದ ಮೇಲೆ ಮಾತನಾಡಿದರು.

ಪ್ರಾರಂಭದಲ್ಲಿ ದತ್ತಿ ದಾನಿ ದಿವಂಗತ ಡಾ. ಪುಟ್ಟಶಂಕರಪ್ಪ ಅವರ ಭಾವಚಿತ್ರಕ್ಕೆ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ, ಉಪನ್ಯಾಸಕ ವಿದ್ವಾನ್ ಪ್ರಗಲ್ಭ, ಶ್ರೀಮತಿ ರಾಜಲಕ್ಷ್ಮಿ ಪುಟ್ಟಶಂಕರಪ್ಪ, ಅವರ ಮಗ ಶ್ರೀ ಭಾಸ್ಕರ, ಸೊಸೆ ಪುಷ್ಪನಮನ ಸಲ್ಲಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂಯೋಜಕ ಶ್ರೀ ಬಿ.ಎಸ್. ಗುರುಪ್ರಸಾದ್ ಈ ದತ್ತಿ ಕಳೆದ ವರ್ಷ ಇಂದಿರಾನಗರದಲ್ಲಿ ದತ್ತಿ ದಾನಿಗಳ ಇಚ್ಛೆಯಂತೆ ಪ್ರಾರಂಭವಾಯಿತು. ಇಲ್ಲಿ ಇಂದು ನಡೆಯುತ್ತಿರುವುದು ಎರಡನೇ ಉಪನ್ಯಾಸ ಎನ್ನುತ್ತಾ, ವೈದ್ಯರಾಗಿದ್ದುಕೊಂಡು ಸಾಹಿತ್ಯ ಕ್ಷೇತ್ರದಲ್ಲಿ, ಅದರಲ್ಲೂ ವೈದ್ಯಕೀಯದ ಪ್ರಮುಖ ವಿಷಯಗಳ ಮೇಲೆ ಅನೇಕ ಕೃತಿಗಳನ್ನು ಪ್ರಕಟಿಸಿ ಜನಸಮೂಹಕ್ಕೆ ಅತ್ಯಗತ್ಯವಾದ ಮಾಹಿತಿ ದೊರೆಯುವಂತೆ ಮಾಡಿದ್ದಾರೆ ಡಾ. ಪುಟ್ಟಶಂಕರಪ್ಪನವರು. ಜೊತೆಗೆ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲೂ ಕೆಲಕಾಲ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ತಮ್ಮ ದತ್ತಿಯ ವಿಷಯ ವೇದೋಪನಿಷತ್ತುಗಳ ಮೇಲೆ ಕೇಂದ್ರೀಕೃತವಾಗಿರಬೇಕು ಎಂಬುದು ಅವರ ಆಸೆಯಾಗಿತ್ತು. ಕೆಲವೇ ಮಾಹೆಗಳ ಹಿಂದೆ ಅವರು ನಮ್ಮನ್ನು ಅಗಲಿದ್ದು ವ್ಯಥೆಯ ಸಂಗತಿ ಎನ್ನುತ್ತಾ ದತ್ತಿಯ ಬಗ್ಗೆ ಮಾಹಿತಿ ಚೆಲ್ಲಿದರು.

ಉಪನ್ಯಾಸಕ ವಿದ್ವಾನ್ ಆರ್.ಎಸ್.ಪ್ರಗಲ್ಭ ಅವರ ಕಿರುಪರಿಚಯವನ್ನು ಗುರುಪ್ರಸಾದ್ ಮಾಡಿದರು. ಕಿರಿವಯಸ್ಸಿನಲ್ಲಿ ವಿವಿಧ ವಿಷಯಗಳ ಅಧ್ಯಯನ ಮಾಡಿ, ವೇದ ಮತ್ತು ಉಪನಿಷತ್ತುಗಳ ಆಳವಾದ ಅಧ್ಯಯನ ಕೈಕೊಂಡಿರುವ ಇವರು ಈಗ ಪದವಿಪೂರ್ವ ವಿದ್ಯಾರ್ಥಿಗಳಿಗೆ ಸಂಸ್ಕೃತವನ್ನು ಕಲಿಸುತ್ತಿದ್ದಾರೆ ಎಂದರು.

ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಎಲ್ಲರನ್ನೂ ಸ್ವಾಗತಿಸಿದರು.

ಉಪನ್ಯಾಸಕ ವಿದ್ವಾನ್ ಪ್ರಗಲ್ಭ ಅವರು 'ಶ್ರೀ ಲಕ್ಷ್ಮೀರಮಣ'ನ ಧ್ಯಾನ ಮಾಡುತ್ತಾ ಉಪನ್ಯಾಸವನ್ನು ಪ್ರಾರಂಭಿಸಿದರು. ಕುಬೇರನಾಗಿ ದತ್ತಿ ಸ್ಥಾಪನೆ ಮಾಡುವುದಕ್ಕಿಂತ, ಏತಕ್ಕೆ ಮಾಡುತ್ತಿದ್ದೇನೆ, ಇದರಿಂದ ಸಮಾಜಕ್ಕೆ ಏನು ಉಪಯೋಗ ಎಂಬ ಆಳವಾದ ತಿಳಿವಳಿಕೆ ಮತ್ತು ಅಭಿಮಾನದಿಂದ ದತ್ತಿ ಇಟ್ಟಿರುವ ಡಾ. ಪುಟ್ಟಶಂಕರಪ್ಪ ಮತ್ತು ಅವರ ಕುಟುಂಬವನ್ನು ಶ್ಲಾಘಿಸಿದರು.



### 'ಏವಂ ವೇದ' ಅಪೌರುಷೇಯ

ಅನೇಕಾನೇಕ ವರ್ಷಗಳ ಹಿಂದೆ ಉತ್ಪತ್ತಿಯಾದ ವೇದ ಅಮೂಲ್ಯವಾದದ್ದು. ಹೇಗೆ ಬಂತು, ಯಾರಿಂದ ಬಂತು ಅನ್ನುವ ಪ್ರಶ್ನೆ ಇಲ್ಲಿ ಉದ್ಭವ ಆಗುವುದಿಲ್ಲ. ಇದೊಂದು ಜೀವನವನ್ನು ಸರಿಯಾದ ರೀತಿಯಲ್ಲಿ ನಡೆಸುವ ಮಾರ್ಗದರ್ಶಿಯಾದ 'ಅಪೌರುಷೇಯ' ವಿದ್ವತ್ ಜ್ಞಾನ. ಪಾಶ್ಚಿಮಾತ್ಯರನ್ನೂ ಸೆಳೆದಿರುವ ಈ ಕೊಡುಗೆ ಅನೇಕ ವಿಷಯಗಳನ್ನು ಒಳಗೊಂಡ ಬೃಹತ್ ಹೊತ್ತಿಗೆ. ಆದ್ದರಿಂದ ಇದನ್ನು ವೇದವ್ಯಾಸರು ನಮ್ಮ ನಿಮ್ಮೆಲ್ಲರ ಅನುಕೂಲಕ್ಕಾಗಿ ಚತುರ್ವೇದಗಳಾಗಿ ವಿಂಗಡಿಸಿದರು. ಧರ್ಮ ಮಾರ್ಗ, ಕರ್ಮ ಮಾರ್ಗ ಮುಂತಾದ ಚೌಕಟ್ಟುಗಳನ್ನು ಅವರು ಹಾಕಿಕೊಟ್ಟರೂ, ಅದರ ಸಂಪೂರ್ಣ ಆಳವಾದ ಅಧ್ಯಯನ ಒಂದು ಸಾಹಸವೇ ಆಗಿತ್ತು. ಜೊತೆಗೆ ಪಠನಕ್ಕಿಂತ ಮನನ ಮಾಡಿಕೊಳ್ಳುವುದು ಮುಖ್ಯವಾಗಿತ್ತು. ಹಾಗೆ ವೇದಮಂತ್ರಗಳನ್ನು ಉಚ್ಚರಿಸುವಾಗ ಏರಿಳಿತದ ಮೂಲಕ 'ತ್ರಯೀ' ರೀತಿಯ ಅನುಕರಣೆ ಬಹುಮುಖ್ಯ. 'ಏವಂ ವೇದ' ಎಂದರೆ ಇದನ್ನು ಅರ್ಥ ಮಾಡಿಕೊಂಡು ನಡೆ ಎಂದು. ಇಷ್ಟಾದರೆ ಸಾರ್ಥಕವಾದಂತೆ ಅಂದರು.

### ಸೃಷ್ಟಿಯ ಬಗ್ಗೆ ಚರ್ಚೆ ಅನಗತ್ಯ

ಮುಂದೆ ಈ ವೇದಗಳ ಮೇಲೆ ಅನೇಕರು ಭಾಷ್ಯಗಳನ್ನು ಬರೆದರು. ಕೆಲವರು ಮೂಲವೇದಗಳ ರಸಾಸ್ವಾದವನ್ನು ತೆಗೆದು 'ಉಪನಿಷತ್ತುಗಳನ್ನು' ನಮ್ಮೆಲ್ಲರ ಮುಂದೆ ಇಟ್ಟಿದ್ದಾರೆ. ಇದರಲ್ಲೂ ಅನೇಕ ಬಗೆಗಳಿವೆ. ಎಲ್ಲವನ್ನೂ ಹೇಳಲು ಸಮಯವಿಲ್ಲ. ಅದರಲ್ಲಿನ ನೀತಿ ಪಾಠ ತಿಳಿದುಕೊಂಡರೆ ಸಾಕು. ನಮ್ಮ ಮನಸ್ಸಿನ ಶಾಂತಿಗಾಗಿ, ಒಳಿತಿಗಾಗಿ ಯಾಗ, ಯಜ್ಞಗಳನ್ನು ಹೇಗೆ ಮಾಡಬೇಕು ಮುಂತಾದ ವಿಷಯಗಳ ರೂಪುರೇಷೆಗಳನ್ನು ಸವಿಸ್ತಾರವಾಗಿ ಉಪನಿಷತ್ತುಗಳು ಸೂಚಿಸುತ್ತವೆ. ಬ್ರಹ್ಮವಿದ್ಯೆಯನ್ನು ಬಹಳ ಸಮಂಜಸವಾಗಿ ಉಪನಿಷತ್ತುಗಳು ತಿಳಿಸುತ್ತವೆ. ಸೃಷ್ಟಿಯ ಬಗ್ಗೆ ತರ್ಕ ಮಾಡುವ ಬದಲು ನಾವು ಇಲ್ಲಿ ಬಂದಿದ್ದೇವೆ, ಬಂದ ಮೇಲೆ ಹೇಗೆ ಜೀವಿಸಬೇಕು ಎಂದು ತಿಳಿದು ನಡೆಯುವುದು ಮುಖ್ಯ. ಮೋಹವನ್ನು ಬಿಟ್ಟು ಶೋಕ, ಭಯ ಬಂಧನಗಳಿಂದ ಮುಕ್ತಿ ಪಡೆಯುವುದು ಪ್ರಮುಖ ವಿಷಯ.

ಉಪಾಸನೆ ಮೂಲಕ ಮೋಕ್ಷ ಪಡೆಯುವುದು, ಕರ್ತ ತಂತ್ರ ಮತ್ತು ವಸ್ತು ತಂತ್ರ ಇವುಗಳ ವಿವರಣೆಯನ್ನು ಮನದಟ್ಟಾಗುವಂತೆ ವಿವರಿಸಿದರು. ಕ್ರಿಯೆಯಿಂದ ಮಾಡುವ ಮತ್ತು ಭಾವನೆಗಳನ್ನು ತುಂಬಿಕೊಂಡು ಮಾಡುವ ವ್ಯತ್ಯಾಸವನ್ನು ಎತ್ತಿ ತೋರಿಸಿದರು. ಇವೆಲ್ಲಾ ಅನುಭವ ಹಾಗೂ ಅನುಭಾವದ ವಿಷಯಗಳಿಗೆ ತಿಳುವಳಿಕೆ ಕೊಡುವ ಸಂಗತಿಗಳು. ಇವೇ ಉಪನಿಷತ್ತುಗಳಲ್ಲಿ ನಮಗೆ ದೊರೆಯುವ ನೀತಿ ಪಾಠ ಎಂದು ತಮ್ಮ ವಿದ್ವತ್ ಉಪನ್ಯಾಸವನ್ನು ಮುಗಿಸಿದರು.

### ಪಾಂಡಿತ್ಯಭರಿತ ಉಪನ್ಯಾಸ

ಅಧ್ಯಕ್ಷೀಯ ಮಾತುಗಳನ್ನು ಡಾ. ಬೈರಮಂಗಲ ರಾಮೇಗೌಡರು ಆಡಿದರು. ಪಾಂಡಿತ್ಯಯುತವಾದ ಉಪನ್ಯಾಸವನ್ನು ಆಳವಾದ ಅಧ್ಯಯನ ಮಾಡಿ ವಿದ್ವಾನ್ ಪ್ರಗಲ್ಭ ಇಂದು ನೀಡಿದ್ದಾರೆ. ದತ್ತಿ ದಾನಿ ಡಾ. ಪುಟ್ಟಶಂಕರಪ್ಪನವರು ಇಂದು ಇದ್ದಿದ್ದರೆ ಖಂಡಿತ ಪ್ರಗಲ್ಭ ಅವರ ಬೆನ್ನು ತಟ್ಟುತ್ತಿದ್ದರು ಎಂದರು. ಕುವೆಂಪು ಅವರು ಸಹ ವೇದ ಉಪನಿಷತ್ತುಗಳ ಅಧ್ಯಯನ ಮಾಡಿದ್ದರು. ಅದಕ್ಕೇ ಸಾಹಿತಿಗಳು ಇದರಲ್ಲಿ ಆಸಕ್ತಿ ವಹಿಸಿ ಇಂತಹ ಉಪನ್ಯಾಸಗಳನ್ನು ಏರ್ಪಡಿಸಿ, ಭಾಗವಹಿಸಿ ತಮ್ಮ ಪಾಂಡಿತ್ಯವನ್ನು ವೃದ್ಧಿಗೊಳಿಸಿಕೊಳ್ಳಬೇಕು ಎಂದು ಡಾ. ಪುಟ್ಟಶಂಕರಪ್ಪ ಯಾವಾಗಲೂ ಹೇಳುತ್ತಿದ್ದರು. ಅವರ ಈ ಅನಿಸಿಕೆ ಇಂದು ಈ ದತ್ತಿ ಮೂಲಕ ಸಾರ್ಥಕವಾಯಿತು. ಇಷ್ಟು ಅಗಾಧವಾದ ಜ್ಞಾನ ಹೊಂದಿರುವ ಪ್ರಗಲ್ಭ ಅವರ ಸೇವೆಯನ್ನು ಪ್ರತಿಷ್ಠಾನ ಇನ್ನು ಮುಂದೂ ಬಳಸಿಕೊಳ್ಳುತ್ತದೆ ಎಂದರು.

ಚಂದ್ರಶೇಖರ ನಾದೂರು ವಂದನಾರ್ಪಣೆ ಮಾಡಿದ ನಂತರ ನೆನೆಪಿನ ಕಾಣಿಕೆ ಸಲ್ಲಿಸುವುದರೊಂದಿಗೆ ಕಾರ್ಯಕ್ರಮ ಸಮಾಪ್ತವಾಯಿತು.

## ದಿನಾಂಕ ೨೩ ಮಾರ್ಚ್ ೨೦೨೫ ಭಾನುವಾರದಂದು ಅಮೋಘವರ್ಷ ನೃಪತುಂಗ ದತ್ತಿ, ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರೀ ದತ್ತಿ, ಶ್ರೀ ತಿರುಮಲೆ ತಾತಾಚಾರ್ಯ ಶರ್ಮಾ ದತ್ತಿ, ಶ್ರೀ ಡಿ.ವಿ. ಗುಂಡಪ್ಪ ದತ್ತಿ, ಗ್ರಂಥಾಲಯ ಪಿತಾಮಹ ಡಾ. ಎಸ್.ಆರ್. ರಂಗನಾಥನ್ ದತ್ತಿ

ಇವುಗಳ ಸಂಯುಕ್ತ ಆಶ್ರಯದಲ್ಲಿ ೧೦ ರಿಂದ ೧೬ರ ವಯೋಮಾನದವರಿಗೆ ಗಮಕ ವಾಚನ ಸ್ಪರ್ಧೆ ಏರ್ಪಡಿಸಲಾಗಿತ್ತು. ಈ ದತ್ತಿಗಳನ್ನು ಶ್ರೀ ಕೆ. ಮೋಹನ್ ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ಅವರು ಸ್ಥಾಪಿಸಿದ್ದಾರೆ. ಸ್ಪರ್ಧಿಗಳು ಡಿ.ವಿ.ಜಿ. ಅವರ 'ಅಂತಃಪುರ ಗೀತೆ' ಸಂಕಲನದ ಯಾವುದಾದರೂ ಒಂದು ಪದ್ಯದ ವಾಚನ ಮಾಡಬೇಕಿತ್ತು.





ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಅವರು ದತ್ತಿಗಳ ಬಗ್ಗೆ ಮಾಹಿತಿ ನೀಡಿ, ಸ್ಪರ್ಧಿಗಳು, ಅವರ ಪೋಷಕರು, ಗುರುಗಳು, ವೇದಿಕೆ ಮೇಲಿನ ಗಣ್ಯರುಗಳನ್ನು ಸ್ವಾಗತಿಸಿದರು.

ಸ್ಪರ್ಧೆಯ ತೀರ್ಪುಗಾರರಾದ ವಿದುಷಿ ಶ್ರೀಮತಿ ಶ್ರೀಮತಿ, ವಿದುಷಿ ಡಾ. ಶ್ಯಾಮಲಾ ಪ್ರಕಾಶ್, ಮುಖ್ಯ ಅತಿಥಿಗಳೂ ಹಾಗೂ ದತ್ತಿ ದಾನಿಗಳಾದ ಶ್ರೀ ಕೆ. ಮೋಹನ್ ದೇವ್ ಆಳ್ವ ಮತ್ತು ಕೋಶಾಧಿಕಾರಿ ಪ್ರೊ. ಚಂದ್ರಶೇಖರ್ ನಾದೂರು, ಕೋದಂಡರಾಮನ್ ಎಲ್ಲರೂ ಒಟ್ಟಿಗೆ ಕೈಜೋಡಿಸಿ ಜ್ಯೋತಿ ಬೆಳಗಿ ಸ್ಪರ್ಧೆಯನ್ನು ವಿಧ್ಯುಕ್ತವಾಗಿ ಉದ್ಘಾಟಿಸಿದರು.

**ಗಮಕ ವಾಚನ ಸ್ಪರ್ಧೆ (ಡಿ.ವಿ.ಜಿ. ಅವರ ಅಂತಃಪುರ ಗೀತೆ ಸಂಕಲನದ ಹಾಡು)**

ವಿದುಷಿ ಡಾ. ಶ್ಯಾಮಲಾ ಪ್ರಕಾಶ್ ಅವರು ಪ್ರಾರಂಭದಲ್ಲಿ 'ವಾರಿಜಾತೆಯೇ..' ಸ್ತುತಿಯನ್ನು ಹಾಡಿದರು.

ಉದ್ಘಾಟನೆ ಮಾಡಿದ ಶ್ರೀ ಮೋಹನ್ ದೇವ್ ಆಳ್ವ ಇಂತಹ ದತ್ತಿ ಸ್ಥಾಪನೆಗೆ ಬಗೆಗೆ ಅನಿಸಿದ ತಮ್ಮ ಮನದಾಳದ ಮಾತುಗಳನ್ನು ಹೇಳಿ ಸ್ಪರ್ಧಿಗಳಿಗೆ ಮತ್ತು ಪೋಷಕರಿಗೆ ಕೆಲವು ಹಿತನುಡಿಗಳನ್ನು ನೀಡಿದರು.

ಸ್ಪರ್ಧೆಯಲ್ಲಿ ೧೦ ರಿಂದ ೧೬ ವಯಸ್ಸಿನ ಹದಿನಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ತೀರ್ಪುಗಾರರಾದ ವಿದುಷಿ ಶ್ರೀಮತಿ ಶ್ರೀಮತಿ ಮತ್ತು ವಿದುಷಿ ಡಾ.ಶ್ಯಾಮಲಾ ಪ್ರಕಾಶ್ ಅವರು ಸ್ಪರ್ಧಿಗಳನ್ನು ಉದ್ದೇಶಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಬಹುಮಾನಕ್ಕಿಂತ ಭಾಗವಹಿಸುವುದು ಮುಖ್ಯ. ಒಮ್ಮೊಮ್ಮೆ ಉತ್ತಮವಾಗಿ ಕಲಿತು ಬಂದಿದ್ದರೂ ಸ್ಪರ್ಧೆಯ ದಿವಸ ವೇದಿಕೆಯ ಮೇಲೆ ವ್ಯತ್ಯಾಸಗಳು ಆಗುತ್ತವೆ. ಇದು ನುರಿತ ಕಲಾವಿದರಿಗೂ ಆಗಿರುವ ಅನುಭವ. ಆದ್ದರಿಂದ ಯಾವ ಸ್ಪರ್ಧಿಯೂ ಧೃತಿಗೆಡದೆ ಮುಂದಿನ ಸ್ಪರ್ಧೆಗೆ ತಾಲೀಮು ಮಾಡಬೇಕು ಎಂದರು.

ಬಹುಮಾನ ವಿತರಣೆ ಸಮಯದಲ್ಲಿ ಶ್ರೇಷ್ಠ ಕಲಾವಿದ ವಿದ್ವಾನ್ ವೇಣುಗೋಪಾಲ್ ಅವರು ವೇದಿಕೆಯನ್ನು ಅಲಂಕರಿಸಿದ್ದರು. ಡಾ. ಬೈರಮಂಗಲ ರಾಮೇಗೌಡ ಅವರು ಅಧ್ಯಕ್ಷತೆ ವಹಿಸಿದ್ದರು.

ಕೆಳಕಂಡ ಸ್ಪರ್ಧಿಗಳು ಬಹುಮಾನವನ್ನು ಪಡೆದರು.

| |
|---|
| **ಪ್ರಥಮ ಬಹುಮಾನ – ಕುಮಾರ ಗುಣವರ್ಧನ್ ರಾವ್ ೪೦೦೦/– ರೂ.** |
| **ದ್ವಿತೀಯ ಬಹುಮಾನ – ಕುಮಾರಿ ಕೃತಿ ಮರಾಠೆ ೩೦೦೦/– ರೂ.** |
| **ತೃತೀಯ ಬಹುಮಾನ – ಕುಮಾರಿ ಸಾನ್ವಿ ಎಸ್. ಜೋಯಿಸ್ ೨೦೦೦/– ರೂ.** |
| **ಸಮಾಧಾನಕರ ಬಹುಮಾನ – ಕುಮಾರಿ ಭುವನ ಎ. ೧೦೦೦/– ರೂ.** |





ಗಾಯಕಿ: **ಡಾ. ಅನಸೂಯಾದೇವಿ,** ಸಾಹಿತಿ, ನಿವೃತ್ತ ಕನ್ನಡ ಪ್ರಾಧ್ಯಾಪಕಿ ಮತ್ತು ಸಂಗೀತಗಾರರು

ಪಕ್ಕ ವಾದ್ಯ: ತಬಲಾ ವಾದಕರು **ಶ್ರೀ ರಮೇಶ್**

# ೨೬ ಮಾರ್ಚ್ ೨೦೨೫ ಬುಧವಾರ ಸಂಜೆ ಕಣಕಟ್ಟೆ ಕೃಷ್ಣಮೂರ್ತಿರಾವ್ ಸ್ಮಾರಕ ದತ್ತಿ ಸಂಗೀತ ಕಾರ್ಯಕ್ರಮ 'ಸಂಗೀತ ವೈವಿಧ್ಯ'

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂಯೋಜನಾಧಿಕಾರಿ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ದತ್ತಿ ಇಟ್ಟಿರುವವರ ಆಶಯದ ನುಡಿಗಳು ಮತ್ತು ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಅವರ ಸ್ವಾಗತ ಹಾಗೂ ಕಲಾವಿದರ ಪರಿಚಯದ ಮಾತುಗಳ ನಂತರ ಗಾಯಕಿ ಡಾ. ಅನಸೂಯಾದೇವಿ ತಮ್ಮ ಸಂಗೀತ ಕಾರ್ಯಕ್ರಮವನ್ನು ಆರಂಭಿಸಿದರು.

ಮೊದಲಿಗೆ ಕನಕದಾಸರ ಕೃತಿ 'ನಮ್ಮಮ್ಮ ಶಾರದೆ ಉಮಾ ಮಹೇಶ್ವರಿ..' ಕೀರ್ತನೆಯನ್ನು ಪ್ರಸ್ತುತಪಡಿಸಿದರು. ನಂತರ ಪುರಂದರದಾಸರ ಕೃತಿ 'ತಾರಕ್ಕ ಬಿಂದಿಗೆ ನಾ ನೀರಿಗೆ ಹೋಗುವೆ..' ಹಾಡಿದರು. ನೀನು ಪಡೆದಿರುವ ಈ ನರಜನ್ಮವನ್ನು ವ್ಯರ್ಥವಾಗಿ ಕಳೆಯಬೇಡ. ಇದನ್ನು ಸರಿಯಾಗಿ ಉಪಯೋಗಿಸು. ಏಕೆಂದರೆ 'ಬಿಂದಿಗೆ ಒಡೆದರೆ ಒಂದೇ ಕಾಸು' ಎಂಬ ಉಪದೇಶವನ್ನು ಕೊಟ್ಟು ನಮಗೆ ಎಚ್ಚರಿಸಿದ್ದಾರೆ ದಾಸರು ಎಂದು ವಿವರಿಸಿದರು. ಮುಂದೆ ರಾಷ್ಟ್ರಕವಿ ಕುವೆಂಪು ಅವರ ಭಾವಗೀತೆ 'ಅಗಣಿತ ತಾರಾ ಗಣಗಳ ನಡುವೆ...', ನೆಚ್ಚಿನ ಕವಿ ಬೇಂದ್ರೆಯವರ ಪ್ರೇಮಗೀತೆ 'ಅಂತರಂಗದ ಮೃದಂಗ.. ತಂ ತನನ ತಾನ', 'ಚೆಲ್ಲಿದರು ಮಲ್ಲಿಗೆಯಾ ..' ಮುಂತಾದ ಗೀತೆಗಳನ್ನು ಹಾಡಿ ಡಾ. ಅನಸೂಯಾದೇವಿ ಅವರು ಸಭಿಕರಿಗೆ ಗೀತೆಗಳ ರಸದೌತಣವನ್ನು ಉಣಿಸಿದರು. ಇಂದಿನ ಈ ದತ್ತಿ ಸಂಗೀತದ ವಿಶೇಷವೆಂದರೆ ಕೀರ್ತನೆಗಳು, ದಾಸರಪದಗಳು, ಭಾವಗೀತೆಗಳು, ಪ್ರೇಮಗೀತೆಗಳು ಹಾಗೂ ಜನಪದ ಶೈಲಿಯ ಗೀತೆಗಳ ಸತ್ಸಂಗ ಮಾಡಿಸಿ ಬಹುದೂರದಿಂದ ಬಂದಿದ್ದ ಶ್ರೋತೃಗಳ ಮನ, ಕರ್ಣ ಮತ್ತು ಜಿಹ್ವೆಯ ಸ್ವಾದದ ದಾಹವನ್ನು ಸಂಪೂರ್ಣವಾಗಿ ತಣಿಸಿದ್ದು.

ಮುಂದೆ 'ನಾನೇನ ಮಾಡಿದೆನೋ ರಂಗ, ನೀ ಎನ್ನ ಕಾಯೋ ..' ಎಂಬ ದಾಸರ ಪದವನ್ನು ಪಕ್ಕವಾದ್ಯಗಳನ್ನು ನುಡಿಸುತ್ತಿದ್ದ ಶ್ರೀ ರಮೇಶ್ ಅವರೂ ಸಹ ಹಾಡಿ ಸಭಿಕರನ್ನು ರಂಜಿಸಿದರು.

ಅಧ್ಯಕ್ಷ ನುಡಿ ಆಡಿ ಪ್ರತಿಕ್ರಿಯಿಸಿದ ಡಾ. ಬೈರಮಂಗಲ ರಾಮೇಗೌಡ ಇದು ಕೇವಲ ಸಂಗೀತ ಕಾರ್ಯಕ್ರಮ ಆಗುವುದು ಬೇಡ, ಇದನ್ನು 'ಸಂಗೀತ ವೈವಿಧ್ಯ' ರೂಪದಲ್ಲಿ ನಡೆಸೋಣ ಅಂದುಕೊಂಡ ತಮ್ಮ ಅನಿಸಿಕೆಯನ್ನು ಕ್ರಿಯಾಶೀಲ ವ್ಯಕ್ತಿತ್ವದ ಡಾ. ಅನಸೂಯಾದೇವಿ ಸಮರ್ಪಕವಾಗಿ ನಡೆಸಿಕೊಟ್ಟು ನಮ್ಮ ಭಾವನೆಗಳನ್ನು ಅರ್ಥೈಸಿಕೊಂಡು ಅವನ್ನು ಸಾಕಾರಗೊಳಿಸಿದ್ದಾರೆ. ಅವರ ಜೀವನೋತ್ಸಾಹ ಬೆರಗಾಗಿಸುವಂತಾದ್ದು. ಇವರು ಕೇವಲ ಗಾಯಕಿಯಲ್ಲ. ರಂಗಭೂಮಿಯಲ್ಲೂ ಸೀತೆಯ ಪಾತ್ರವನ್ನು 'ನೈಜ' ವೇನೋ ಅನ್ನುವ ರೀತಿಯಲ್ಲಿ ನಿಭಾಯಿಸಿದ್ದನ್ನು ನಾನು ಕಂಡಿದ್ದೇನೆ. ಇವರು ಕೇವಲ ಯಾಂತ್ರಿಕ ಆಧ್ಯಾಪಕಿ ಆಗಿರಲಿಲ್ಲ. ವಿದ್ಯಾರ್ಥಿಗಳ ಭಾವನೆಗಳಿಗೆ ಸ್ಪಂದಿಸುವ ಅಪರೂಪದ ಅಧ್ಯಾಪಕಿಯಾಗಿ ಮೆಚ್ಚುಗೆಯ ಜೊತೆಗೆ ಪ್ರೀತಿಯನ್ನೂ, ಅಭಿಮಾನವನ್ನೂ ಗಳಿಸಿದ್ದಾರೆ. ಇವರದು ಬಹುಮುಖ ಪ್ರತಿಭೆ. ಸಂಗೀತ ಆತ್ಮತೃಪ್ತಿ ಮತ್ತು ಕೇಳುಗರ ತೃಪ್ತಿ ಎರಡನ್ನೂ ಪೂರೈಸಿದಾಗ ಅದು ಸಂಪೂರ್ಣ ಅನ್ನಿಸುತ್ತದೆ. ಲೌಕಿಕ ಮತ್ತು ಅಲೌಕಿಕತೆಯ ನಡುವೆ ಒಂದು ಸುವರ್ಣ ಸೇತುವೆ ನಿರ್ಮಾಣ ಮಾಡುತ್ತದೆ. ಪ್ರತಿಯೊಬ್ಬ ಸಂಗೀತ ಕಲಾವಿದರಲ್ಲೂ ಅವರದೇ ಆದ ಶೈಲಿ, ಅದರದೇ ಆದ ಧಾಟಿ ಇರುತ್ತದೆ. ಅವನಂತೆ ಇವನಲ್ಲ, ಇವನಂತೆ ಅವನಲ್ಲ ಎನ್ನುವಂತೆ ಎಂ. ಬಾಲಮುರಳಿಕೃಷ್ಣ, ಭೀಮಸೇನ ಜೋಶಿ, ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಗಂಗೂಬಾಯಿ ಹಾನಗಲ್ ಮುಂತಾದ ಮಹಾನ್ ಕಲಾವಿದರ ಹೆಸರನ್ನು ಉದಾಹರಿಸಿದರು. ಪಕ್ಕವಾದ್ಯ ನುಡಿಸಿದ ರಮೇಶ್ ಅವರನ್ನೂ ಶ್ಲಾಘಿಸಿದರು. ಕಚೇರಿಯಲ್ಲಿ ನಿರ್ಜೀವ ಕಡತಗಳ ಒಡನಾಟದ ಮಧ್ಯೆಯೂ ಜೀವಭರಿತ ಸಂಗೀತದ ಜಗತ್ತಿನ ಸಂಪರ್ಕ ಇಟ್ಟುಕೊಂಡು ಸಂಗೀತ ಕಲೆಯನ್ನು ಮೈಗೂಡಿಸಿಕೊಂಡಿರುವುದು ಅಸಾಮಾನ್ಯ ಕೆಲಸ ಎಂದರು. ರಮೇಶ್ ನಿರ್ಜೀವವಾದ ಚರ್ಮವನ್ನು ಮಾತನಾಡುವಂತೆ ಮಾಡಬಲ್ಲ ಚತುರ. ಎರಡೂ ಕೆಲಸಗಳನ್ನು ಒಂದೇ ಸಮನಾಗಿ ಮಾಡುತ್ತಿರುವ 'ಸವ್ಯಸಾಚಿ' ನಮ್ಮ ರಮೇಶ್ ಎಂದು ರಾಮೇಗೌಡ ಹೃದಯತುಂಬಿ ನುಡಿದರು.



ಕಾಯಕ್ರಮದಲ್ಲಿ ದತ್ತಿಯ ರೂವಾರಿ ಕಣಕಟ್ಟೆ ಕೃಷ್ಣಮೂರ್ತಿ ರಾವ್ ಅವರ ಮೊಮ್ಮಗ ಶ್ರೀ ಪ್ರಕಾಶ್ ಜೆ.ಎಸ್. ಮತ್ತು ಕಣಕಟ್ಟೆಯವರೇ ಆದ ಶ್ರೀ ಶ್ರೀಧರ್ ಉಪಸ್ಥಿತರಿದ್ದದ್ದು ಶೋಭೆಯನ್ನು ಉಂಟುಮಾಡಿತು.

ಪುಸ್ತಕಗಳ ಕಾಣಿಕೆ ಮತ್ತು ವಂದನಾರ್ಪಣೆಯೊಂದಿಗೆ ಇಂದಿನ ರಸಭರಿತ 'ಸಂಗೀತ ವೈವಿಧ್ಯ' ಕಾರ್ಯಕ್ರಮ ಮುಕ್ತಾಯವಾಯಿತು.



# ಬಿ.ಎಂ.ಶ್ರೀಕಂಠಯ್ಯ

## ೬. ನಾಟಕಗಳು

ಮುಂದುವರೆದ ಭಾಗ...

ಡಾ. ರಾಮೇಗೌಡ (ರಾಗೌ)

**ಹರಿಕಾರ :** ಅಯ್ಯೊ! ಅಯ್ಯೊ! ಅವನು ನನ್ನನ್ನಟ್ಟಿದುದೆ ತಡವಾಯಿತೊ ಇಲ್ಲವೆ ನಾನೆ ತಡವಾಗಿ ಬಂದೆನೊ?

**ಮೇಳನಾಯಕ :** ಯಾವ ಅವಸರದ ಕೆಲಸಕ್ಕೆ ತಡವಾಯಿತು?

**ಹರಿಕಾರ :** ತ್ಯೂಕ್ರೋಸ್ ಹೇಳಿದ, ಯಾವುದೇ ಕಾರಣವಿದ್ದರೂ ತಾನೇ ಬರುವತನಕ, ಏಜಾಕ್ಸ್ ಗುಡಾರದಿಂದ ಆಚೆ ಕದಲಕೂಡದು ಎಂದು.

**ಮೇಳನಾಯಕ :** ಸರಿ, ನಾ ಹೇಳುವೆನಲ್ಲ; ಲೇಸಿನ ಕಡೆ ಮನಸ್ಸು ತಿರುಗಿ ಅವನು ಹೊರಕ್ಕೆ ಹೋದ.

**ಹರಿಕಾರ :** ಇದೆಲ್ಲಾ, ಶುದ್ಧ ಅಪದ್ಧ; ಕಾಲ್ಕಾಯಸ್ ಹೇಳಿದ ಕಣಿಯೇನಾದರೂ ಸತ್ಯವಾಗುವುದಾದರೆ ಇದೆಲ್ಲಾ ಶುದ್ಧ ಅವಿವೇಕ.

**ಮೇಳ (ಮೊದಲ ನಾವಿಕ):** ಅದೇನು ಕಣಿ? ಅವನೇನು ಹೇಳಿದ? ನೀನೇನು ಕೇಳಿದೆ?

**ಹರಿಕಾರ :** ನನಗಷ್ಟು ಮಾತ್ರ ಗೊತ್ತು; ನಾನೆ ಅಲ್ಲಿದ್ದರಿಂದ ನಾಯಕರೆಲ್ಲರೂ ಸಭೆ ಸೇರಿಕೊಂಡಿದ್ದಾಗ ಕಲ್ಕಾಯಸ್ ಬಂದವನೇ ತ್ಯೂಕ್ರೋಸ್ ಒಬ್ಬನನ್ನೇ ಏಟ್ರಿಡಿಗಳಿಂದ ಬೇರ್ಪಡಿಸಿ ಅಲ್ಲಿಂದ ಹೊರಕ್ಕೆ ಕರೆದುಕೊಂಡು ಬಂದು ಕೈಯಲ್ಲಿ ಕೈಯಿಟ್ಟು ಸ್ನೇಹದಿಂದ ಹೇಳಿದ 'ಆ ಏಜಾಕ್ಸ್'ನನ್ನು ನೀನೇನಾದರೂ ಜೀವಸಹಿತ ಕಾಣಬೇಕೆಂದಿದ್ದರೆ, ಈ ಹೊತ್ತು ಒಂದು ದಿನ ಹೇಗಾದರೂ ಮಾಡಿ ಗುಡಾರದೊಳಗೆಯೇ ಕಾವಲಿಟ್ಟುಕೊಂಡಿದ್ದು ಹೊರಕ್ಕೆಲ್ಲೂ ಹೋಗದಂತೆ ನೋಡಿಕೊಳ್ಳಬೇಕು. ಈ ಒಂದು ದಿನ ಆಗ ಮಾತ್ರ ಅಥವಾ ದೇವಿಯ ಆಗ್ರಹ ಅವನ ಮೇಲೆರಗೀತು, ಎಂದು.

'ಅಶ್ವತ್ಥಾಮನ್' ನಾಟಕದಲ್ಲಿ ಅದರ ತದ್ರೂಪವೇ ಇದೆ. ಮಹಾಭಾರತದ ಕಥೆಯಲ್ಲಿ ಈ ಕಲ್ಪನೆಯೇ ಇಲ್ಲದಿರುವುದರಿಂದ ಅದರಲ್ಲಿ ಯಾವುದೇ ವ್ಯತ್ಯಾಸವನ್ನು ಮಾಡಲು ಹೋಗಿಲ್ಲ. ಸಂಭಾಷಣೆಯನ್ನು ನೋಡಿದರೆ ಇದು ಸ್ಪಷ್ಟವಾಗುವುದು:

**ದೂತನ್ :** ಆಹಾ! ಅವನ್ ಕಟಿಪುದುದೆ ತಡವೊ? ಮೇಣ್, ಬಂದುದೇ ತಡವೊ ನಾನ್?

**ಮೇಳನಾಯಕ :** ಏನಂತುಟವಸರಂ?

**ದೂತನ್ :** ತಾನ್ ಮರುಳ್ವನ್ನಗಂ, ತಡಿದಿರಿಂ ಬೀಡಿನೊಳೆ ಎಂದೊಡೆಯನ್ ಅಟ್ಟಿದನ್.

**ಮೇಳನಾಯಕ :** ಪೇೞ್ದಿನೇ, ಇದೆತಾನೆ ಪೋದನ್ –ನಲ್ಲದೇ: ದೇವತೆಗೆ ಶಾಂತಿಯನ್ ಮಾಡುವುದೆ ಅವನೆಣಿಕೆ.

**ದೂತನ್ :** ಪರ್ಚು, ಪರ್ಚು! ದಿವ್ಯಜ್ಞಾನಮಿರೆ ಕೃಷ್ಣಂಗೆ!

**ಮೇಳನಾಯಕ :** ಏನವನ್ ಪೇೞ್ದಕಣಿ? ನೀನ್ ಕಂಡ ಕಣಿಯುಮೇನ್?

**ದೂತನ್ :** ಸುಮ್ಮನೆ ಕೇಳ್–ಕೇಳ್ದುದನ್ ಪೇೞ್ವೆನ್–

ಪಲ್ಮೊರೆವ ಬೀರರನ್ ಪಡೆಗಳನ್

ಬಿಟ್ಟೇಕಲವ್ಯನೊಡವಂದು,

ಮೈತ್ರಿಯೊಳ್ ಕಯ್ವಿಡಿದು, ಕೃಷ್ಣನಿಂತೆಂದನ್ ಆ ಅಶ್ವತ್ಥಾಮನ್

ಈ ಪಗಲ್, ಈ ಪೊಳೆವಿದೊಂದು ಪಗಲ್, ಒಳಗಿರ್ಕೆ. ಪೊಱಗಣ್ಗೆ ಬಿಡದಿರ್.

ಏನಾನುಮನ್ ಮಾಡಿ ಬೀಡಿನೊಳೆ ಮಱೆಯಿರಿಸು,

ಬಾೞ್ವುದನ್ ಬಯಸೆ

ಇದೊಂದು ಪಗಲ್, ಆ ರುದ್ರನಾಗ್ರಹಂ ಬಡಿವುದು,

ಎೞ್ಚಱಿಕೆ!.

ಎಂದನ್

ಜಗತ್ತಿನಲ್ಲಿ ಹಿಂಸೆಗೆ ಕೊನೆಯಿಲ್ಲವೆ? ಎಲ್ಲ ಕಾಲದಲ್ಲೂ ಎಲ್ಲರನ್ನೂ ಕಾಡುತ್ತಾ ಬಂದಿರುವ ಪ್ರಶ್ನೆ ಇದು. ಅಸೂಯೆ, ಸೇಡು, ವಂಚನೆ, ಮಹತ್ವಾಕಾಂಕ್ಷೆಗಳು ಇದರ ಪ್ರಚೋದನಾ ಶಕ್ತಿಗಳು. ಹಿಂಸೆ ದೊಡ್ಡದಿರಲಿ, ಸಣ್ಣದಿರಲಿ ತನ್ನ ಸಂತಾನವನ್ನು ಬೆಳೆಸುತ್ತಲೇ ಬಂದಿದೆ. ವೈರ, ಕಲಹಗಳು ಕರ್ಮದ ಭಾಗವಾಗಿ ಕೆಲಸ ಮಾಡುತ್ತಿವೆ ಎಂದು ಲೇಖಕರು ಅಭಿಪ್ರಾಯಪಡುತ್ತಲೇ ಬಂದಿದ್ದಾರೆ. ಇಂತಹ ಹಿನ್ನೆಲೆಯೇ 'ಏಜಾಕ್ಸ್' ಮತ್ತು 'ಅಶ್ವತ್ಥಾಮನ್' ನಾಟಕಗಳನ್ನು ರೂಪಿಸಿದೆ. ಅದಕ್ಕಾಗಿ 'ಏಜಾಕ್ಸ್' ನಾಟಕದಲ್ಲಿ ಮೇಳದವರ ಮಾತಾಗಿ 'ಕರ್ಮಮ್ ಮರಿಯಿಕ್ಕುತಿರೆ' ಎಂಬ ಹೇಳಿಕೆ ಬಂದಿದೆ (ಸುಜನಾ ಅವರ ಅನುವಾದ).ಇದೇ ಮಾತನ್ನು ಅದೇ ಮೇಳದವರ ಬಾಯಿಯಲ್ಲಿ 'ಕರ್ಮಮೀಪರಿ ಮಱಿಗೆಮಱಿ

ಇಕ್ಕುತಿರ್ಕುಂ' ಎಂದು 'ಅಶ್ವತ್ಥಾಮನ್' ನಾಟಕದಲ್ಲಿ ಆಡಿಸಲಾಗಿದೆ. ಸ್ವಲ್ಪ ವಿಸ್ತೃತವೆನ್ನುವಂತೆ ಇದೇ ಮಾತನ್ನು ಕುವೆಂಪು ಅವರು ತಮ್ಮ 'ಬೆರಳ್‌ಗೆ ಕೊರಳ್' ನಾಟಕದಲ್ಲಿ ದ್ರೋಣನ ಬಾಯಿಯಲ್ಲಿ "ಅಂತೆ ಕರ್ಮದ ಪಾಂಗು: ಮರಿಗೆ ಮರಿ : ಮರಿಗೆ ಮರಿ : ಬೆರಳ್‌ಗೆ ಕೊರಳ್" ಎಂದು ಆಡಿಸುತ್ತಾರೆ. ಮೊದಲೆರಡು ನಾಟಕಗಳಿಗಿಂತ ಇಲ್ಲಿ ಪರಿಸ್ಥಿತಿ ಪರಿಸರಗಳು ಬೇರೆಯಾಗಿವೆ; ಆದರೆ, ಪರಿಣಾಮ ಒಂದೇ ಎಂದು ತೋರುತ್ತದೆ. ಕುವೆಂಪು ಅವರು ತಮ್ಮ 'ಬೆರಳ್‌ಗೆ ಕೊರಳ್' ನಾಟಕವನ್ನು ೧೯೪೭ರಲ್ಲಿ ಪ್ರಕಟಿಸಿದ್ದರಿಂದ, ಅದಕ್ಕೂ ಹಿಂದೆಯೇ ಪ್ರಕಟವಾಗಿದ್ದ 'ಅಶ್ವತ್ಥಾಮನ್' ನಾಟಕದ ಈ ಮಾತು ಅವರ ಮೇಲೆ ಪ್ರಭಾವ ಬೀರಿರಬಹುದು; ಇಲ್ಲವೆ, ಕುವೆಂಪು ಅವರಿಗೂ 'ಏಜಾಕ್ಸ್' ನಾಟಕದ ಮಾತು ಮೂಲವಾಗಿದ್ದಿರಬಹುದು.

ನಾಟಕದ ಕಡೆಯ ನಾಟಕೀಯ ವ್ಯಂಗ್ಯಕ್ಕೆ ಬರೋಣ. ಏಜಾಕ್ಸ್ / ಅಶ್ವತ್ಥಾಮನ ಶವಸಂಸ್ಕಾರ ಸಂದರ್ಭದಲ್ಲಿ ಒದಿಸ್ಯೂಸ್/ಕೃಷ್ಣ ಇರುವುದು ಬೇಡವೆಂಬುದು ತ್ಯೂಕ್ರೋಸ್ / ಏಕಲವ್ಯನ ಅಭಿಪ್ರಾಯ. ಗೆಳೆಯನ ಮನಸ್ಸನ್ನು ಗೆಳೆಯ ಅರಿತಿದ್ದ; ಅದಕ್ಕೆ ಈ ತೀರ್ಮಾನ. ಈ ತೀರ್ಮಾನವನ್ನು ಗೌರವಿಸಿ ಒದಿಸ್ಯೂಸ್/ ಕೃಷ್ಣ ನಿರ್ಗಮಿಸಿದ್ದು ಇನ್ನೂ ವಿಶೇಷ. ಹೆಚ್ಚು ಮಾನವೀಯವಾಗುವ ಈ ಸಂದರ್ಭ ಆಕರ್ಷಣೀಯ. ಈ ಸನ್ನಿವೇಶದಲ್ಲಿ 'ಏಜಾಕ್ಸ್' ನಾಟಕದಲ್ಲಿ ಈ ಮಾತುಗಳಿವೆ (ಸುಜನಾ ಅವರ ಅನುವಾದ):

**ತ್ಯೂಕ್ರೋಸ್** : ಓ, ಲರ್ತಿಯಸ್ ಪುತ್ರ ನನ್ನನ್ನು ಕ್ಷಮಿಸು, ಈ ಅಪಕರ್ಮದಲ್ಲಿ ನೀನು ಸೇರಲು ನಾನು ಸಮ್ಮತಿಸದಿದ್ದರೆ ನನ್ನನ್ನು ಕ್ಷಮಿಸು. ಸತ್ತವನಿಗೆ ಅದರಿಂದ ಸಂತೋಷವಾಗುವುದೋ ಏನೋ.

**ಒದಿಸ್ಯೂಸ್** : ಒಳ್ಳೆಯದು; ನನ್ನಾಸೆ ಅದಾಗಿದ್ದಿತು. ನಿಮಗದು ಬೇಡವಾದಲ್ಲಿ ನಾನಾ ತೀರ್ಪಿಗೆ ತಲೆಬಾಗಿ ತೆರಳುವೆ.

'ಅಶ್ವತ್ಥಾಮನ್' ನಾಟಕದ ಈ ಪರಿಕಲ್ಪನೆಗೂ 'ಏಜಾಕ್ಸ್' ನಾಟಕವೇ ಮೂಲ. ಕಲ್ಪನೆಯನ್ನಲ್ಲದೆ ಮಾತುಗಳನ್ನೂ ಅಲ್ಲಿಂದಲೇ ಸ್ವೀಕರಿಸಲಾಗಿದೆ. ಅವು ಹೆಚ್ಚು ಕಡಿಮೆ ಒಂದೇ ಆಗಿವೆ; ಗಮನಿಸಿ.

**ಏಕಲವ್ಯನ್** : ಆದೊಡಂ ಪ್ರೇತರ್ಕ್ಮಂಗಳೊಳ್, ಓ ವಾಸುದೇವಾ– ನಿನ್ನನೆಮ್ಮೊಳ್ ಕೂಡೆ ಅಳ್ಕುವೆನ್. ಪ್ರಿಯಮೊ ಅದು ಅಪ್ರಿಯಮೊ ಕೆಳೆಯಂಗೆ ಅಱಿಯೆನಾನ್, ಈ ಒಂದಱೊಳ್ ಕ್ಷಮಿಸು, ಬೇಡುವೆನ್.

**ಕೃಷ್ಣನ್** : ನಿಮ್ಮ ಸಂತೋಷಂ –ಎನ್ನಿಷ್ಟಮಲ್ತಿಲ್ಲಿ. ನಿನ್ನ ಠಿಂಗಿದೋ ತಲೆವಾಗಿ ಪೋಗುವೆನ್.

ಮೇಲಿನ ಉದಾಹರಣೆಗಳು ಕೇವಲ ಮಾದರಿಗಳಷ್ಟೇ; ಇಡೀ ನಾಟಕವೇ ಮೂಲವನ್ನು ಅನುಸರಿಸಿದೆ. ಅಶ್ವತ್ಥಾಮನನ್ನು ಆತ್ಮಹತ್ಯೆ ಮಾಡುವ ಹಾಗೆ ಚಿತ್ರಿಸಿದ್ದರಿಂದ, ಕಥೆ ಬೆಳೆಯಲು ಅನುಕೂಲವಾಯಿತು; ಮಹಾಭಾರತದ ಕಥೆಗಿಂತ ಭಿನ್ನವಾಗಿರಲು ಸಾಧ್ಯವಾಯಿತು. ಏಜಾಕ್ಸ್ ಪಾತ್ರವನ್ನು ಗಮನದಲ್ಲಿರಿಸಿಕೊಂಡೇ ಅಶ್ವತ್ಥಾಮನ ಅಂತ್ಯವನ್ನು ರೂಪಿಸಿರುವುದು ಸ್ಪಷ್ಟ. ರುದ್ರನಾಟಕ ದುರ್ಘಟನೆಗಳಿಂದ ಕೂಡಿದ್ದರೆ ಸಾಕು ಎಂದು ಅರಿಸ್ಟಾಟಲನೇ ಹೇಳಿದ್ದ. ಆ ಪ್ರಕಾರ ಅಶ್ವತ್ಥಾಮನನ್ನು ಆತ್ಮಹತ್ಯೆ ಮಾಡಿಕೊಳ್ಳದಂತೆ ಚಿತ್ರಿಸಿಯೂ ರುದ್ರನಾಯಕನನ್ನಾಗಿ ಮಾಡುವ ಅವಕಾಶವಿತ್ತು. ಆದರೆ ಬಿ.ಎಂ.ಶ್ರೀ. ಅವರು 'ಏಜಾಕ್ಸ್' ನಾಟಕವನ್ನು ಮುಂದಿರಿಸಿಕೊಂಡು ಅಶ್ವತ್ಥಾಮನ ಅಂತಿಮ ಹಂತವನ್ನು ಬರೆಯಲು ಹೊರಟಿದ್ದರಿಂದ, ಅಶ್ವತ್ಥಾಮನ ಕಥೆ ಮೂಲರೂಪದಲ್ಲಿ ಉಳಿದುಕೊಳ್ಳದೇಹೋಯಿತು; ಮಾತ್ರವಲ್ಲ, ಇಡೀ ನಾಟಕ 'ರೂಪಾಂತರ'ವೆಂಬಂತೆ ಭಾಸವಾಗಲು ಕಾರಣವಾಯಿತು.

ಆದಕಾರಣ 'ಅಶ್ವತ್ಥಾಮನ್' ಸಂಪೂರ್ಣ ಸ್ವತಂತ್ರ ನಾಟಕವಾಗಿ ನಿಲ್ಲುವುದು ಕಷ್ಟ. ಇದರ ಪಾತ್ರಗಳ ಜಾಗದಲ್ಲಿ 'ಏಜಾಕ್ಸ್' ನಾಟಕವಾಗಿ ಪರಿವರ್ತಿತವಾಗಿಬಿಡಬಹುದು. ಇಲ್ಲಿನ ಅಶ್ವತ್ಥಾಮ, ರುದ್ರ, ಕೃಷ್ಣ, ಭಾರ್ಗವಿ, ಏಕಲವ್ಯ, ಭೀಮ, ರುದ್ರಶಕ್ತಿ ಪಾತ್ರಗಳಲ್ಲಿ ಕ್ರಮವಾಗಿ 'ಏಜಾಕ್ಸ್' ನಾಟಕದ ಏಜಾಕ್ಸ್, ಅಥೆನಾ, ಒದಿಸ್ಯೂಸ್, ತೆಕ್ಮೆಸ್ಸಾ, ತ್ಯೂಕ್ರೋಸ್, ಅಗಮೆಮ್ನೋನ್, ಯೂರಿಸಾಸಿಸ್ ಪಾತ್ರಗಳೇ ಇವೆ. ಮೇಳದಲ್ಲಿಯೂ ಅಂತಹ ವ್ಯತ್ಯಾಸವೇನೂ ಇಲ್ಲ. ಮಹಾಭಾರತದ ಕಥೆಯನ್ನು ಸಂದರ್ಭಕ್ಕನುಸಾರವಾಗಿ ದುಡಿಸಿಕೊಂಡುದು, ಅದಕ್ಕೆ ಹೊಸ ಆಯಾಮವನ್ನು ಕೊಟ್ಟದ್ದು ಮಾತ್ರ ಇಲ್ಲಿನ ಸ್ವಂತಿಕೆ.

'ಅಶ್ವತ್ಥಾಮನ್' ನಾಟಕವನ್ನು ಸ್ವತಂತ್ರವೆಂಬಂತೆ ಓದಿದರೆ, ಅದು ಕನ್ನಡದ ಅತ್ಯುತ್ತಮ ನಾಟಕಗಳಲ್ಲಿ ಒಂದೆನಿಸುವುದು. 'ಏಜಾಕ್ಸ್' ನಾಟಕದ ಜೊತೆಯಲ್ಲಿ ಓದಿದರೆ ಅದರ ಅಂಚಿನಲ್ಲಿ ಬೆಳೆದ ವೃಕ್ಷದಂತೆ ಗೋಚರವಾಗುವುದು. ಆಗ ಅದರ ನೆರಳು ಮೇಲೆ ಇದ್ದು, ಅದು ಬೀಸಿದರೆ ಇದು ಬಾಗುತ್ತದೆ ಕೂಡ.

ನಾಟಕವನ್ನು ಹಳಗನ್ನಡದಲ್ಲಿ ಬರೆದಿದ್ದರಿಂದ, ಅದಕ್ಕೊಂದು ವಿಶೇಷ ಬಿಗಿಬಂಧ ಒದಗಿರುವುದು ನಿಜ; ಆದರೆ ಹಳಗನ್ನಡ ಬಳಕೆ ಅನಿವಾರ್ಯವೇನಾಗಿರಲಿಲ್ಲ. ಇದಕ್ಕೆ ಬದಲಾಗಿ, ಹಳಗನ್ನಡ ಜೊತೆಗೆ ಹೊಸಗನ್ನಡವನ್ನು ಕಸಿಮಾಡಿ ಬರೆದಿದ್ದರೆ ಚೆನ್ನಾಗಿರುತ್ತಿತ್ತು. ಹಳಗನ್ನಡ ಭಾಷಾ ಶೈಲಿಯ ನೆಪದಲ್ಲಿ ರಳ–

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 31-03-2025

ಶಕಟರೇಫಗಳನ್ನು ಬಳಸಿಕೊಂಡುದು ಅನಗತ್ಯ ಹೊರೆ; ಸರಿಯಾದ ಕ್ರಮವಲ್ಲ. ಏಕೆಂದರೆ, ಆ ಎರಡೂ ಅಕ್ಷರಗಳು ಬಳಕೆ ತಪ್ಪಿ ಶತಮಾನಗಳೇ ಕಳೆದಿದ್ದುವು. ಇಷ್ಟಾದರೂ ಶ್ರೀಯವರ ಹಳಗನ್ನಡ ಭಾಷಾ ಪಾಂಡಿತ್ಯ ಬೆರಗುಗೊಳಿಸುವಂಥದು. ಈ ಪಾಂಡಿತ್ಯ ಅವರ ಸೃಜನಶೀಲತೆಯ ಮೇಲೆ ಖಂಡಿತ ಪ್ರಭಾವ ಬೀರಿದೆ. 'ಶ್ರೀ'ಯವರ ಭಾಷಾ ಬಳಕೆಯಲ್ಲಿ 'ಇಂಗ್ಲಿಷ್ ಗೀತಗಳು' ಕೃತಿಯದು ಒಂದು ತುದಿ. 'ಅಶ್ವತ್ಥಾಮನ್' ನಾಟಕದ್ದು ಇನ್ನೊಂದು ತುದಿ; ಮೊದಲನೆಯದರ ಭಾಷೆಯನ್ನು ಎರಡನೆಯದರಲ್ಲಿ ಬಳಸಿದ್ದರೆ ಚೆನ್ನಾಗಿರುತ್ತಿತ್ತು. ನಾಟಕ ಕಡೆಕಡೆಗೆ ಸಾಗಿದಂತೆ ಹೆಚ್ಚು ಸಂಕೀರ್ಣವಾಗುವುದು. ಕ್ರಿಯೆ ತನ್ನ ವೇಗೋತ್ಕರ್ಷತೆಯನ್ನು ಹೆಚ್ಚಿಸಿಕೊಳ್ಳುವುದು. ಘಟನೆಗಳು, ಸಂಗತಿಗಳು, ಮನಃಸ್ಥಿತಿಗಳು ಒಂದಕ್ಕೊಂದಕ್ಕೆ ತೆಕ್ಕೆ ಬೀಳುವುವು. ಪಾತ್ರಗಳು ತಮ್ಮ ವೈಯಕ್ತಿಕ ಬದುಕಿನೊಡನೆ ನಾಯಕ ಪಾತ್ರದೊಡನೆ ಇರುವ ಸಂಬಂಧದ ರೀತ್ಯಾ ತೆರೆದುಕೊಳ್ಳುವುವು. ಉತ್ಕಟತೆ, ತಾಕಲಾಟ, ಅನಿಶ್ಚಯತೆಗಳನ್ನು ಅವು ಅನುಭವಿಸುವುವು. ಹೊಂದಾಣಿಕೆ ಮತ್ತು ತತ್ವಬದ್ಧತೆ ಸಂಘರ್ಷಕ್ಕೆ ಇಳಿಯುವುವು. ಆರಂಭದಲ್ಲಿನ ದೈವದ ಪ್ರವೇಶ ಮತ್ತು ದೈವ–ಮಾನವ ಸಂಘರ್ಷ ಕಡಿಮೆಯಾಗಿ, ನಾಟಕ ಕೇವಲ ಮಾನವೀಯವಾಗುವುದು. ನಾಟಕ ತನಗೆ ತಾನೆ ಜಟಿಲ ಸ್ವರೂಪದ್ದಾಗಿದ್ದು, ವಾಸ್ತವಿಕತೆ ಮತ್ತು ಭ್ರಾಮಕತೆಗಳ ಸಂಘರ್ಷದ ನೆಲೆಯಲ್ಲಿ ಕೆಲಸ ಮಾಡುವುದು. ಆ ಮೂಲಕವೇ ಕಲಾತ್ಮಕತೆಯನ್ನು ಸಾಧಿಸಿರುವುದು. ಈ ಮಾತುಗಳು 'ಅಶ್ವತ್ಥಾಮನ್' ನಾಟಕಕ್ಕೆ ಹೇಗೆ ಅನ್ವಯಿಸುವುವೊ ಹಾಗೆಯೇ 'ಏಜಾಕ್ಸ್' ನಾಟಕಕ್ಕೂ ಅನ್ವಯಿಸುತ್ತವೆ.

## ಪ್ರಸ್ತುತ ತಿಂಗಳ ಅಂಗಳ

**೧೨.೦೪.೨೦೨೫ ಶನಿವಾರ ಸಂಜೆ : ೫.೦೦ ಗಂಟೆಗೆ**
ಸೂ.ವೆಂ.ಆರಗ ವಿಮರ್ಶಾ ಪ್ರಶಸ್ತಿ ಮತ್ತು
ಡಾ. ವಿಜಯಾಸುಬ್ಬರಾಜ್ ಗಣ್ಯಲೇಖಕಿ
ಪ್ರಶಸ್ತಿ ಪ್ರದಾನ ಸಮಾರಂಭ

**೨೨.೦೪.೨೦೨೫ ಮಂಗಳವಾರ ಸಂಜೆ : ೫.೦೦ ಗಂಟೆಗೆ**
ವಸುಂಧರ ಮತ್ತು ಪರಮಶಿವಯ್ಯ ದತ್ತಿಯ
ಹಸ್ತಪ್ರತಿ ಮತ್ತು ತಾಳೆಗರಿ ಅಧ್ಯಯನ ಪುರಸ್ಕಾರ
ಪ್ರದಾನ ಸಮಾರಂಭ

**೨೪.೦೪.೨೦೨೫ ಗುರುವಾರ ಸಂಜೆ : ೫.೦೦ ಗಂಟೆಗೆ**
ಸಿ.ಕೆ. ನಾಗರಾಜರಾವ್, ಕೆ.ಪಿ.ರಾವ್, ಕೊರಟಿ
ಶ್ರೀನಿವಾಸರಾವ್ ದತ್ತಿ
ವಿಚಾರ ಮಂಡನೆ : ಡಾ. ರಾಮಲಿಂಗೇಶ್ವರ (ಸಿಸಿರಾ)
ವಿಷಯ: ಸಂಸ್ಕೃತಿ ಸಾಹಿತ್ಯ ಸಂವರ್ಧನೆ ಮತ್ತು ಸಾಂಸ್ಕೃತಿಕ ಸಂಘಟನೆಗಳು

**೨೭.೦೪.೨೦೨೫ ಭಾನುವಾರ ಬೆಳಗ್ಗೆ : ೧೦.೩೦ ಗಂಟೆಗೆ**
ನಾದಯೋಗಿ ಶ್ರೀ ಭೈರವಿ ಕೆಂಪೇಗೌಡ ದತ್ತಿಯ ಅಡಿಯಲ್ಲಿ
ಭೈರವಿ ರಾಗದ ಗಾಯನ ಸ್ಪರ್ಧೆ
(ಉತ್ತರಾದಿ ಅಥವಾ ದಕ್ಷಿಣಾದಿ)

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004
Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೩೨೮೧೨೧೨೩